**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1086/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.03**

**ದಿನಾಂಕಃ** 01.04.2025

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿಯ ಮಗನಿಗೆ ನೀಡಿದ ಕಾರಿನ ಸಾಲದ ಹಣದ ಡೌನ್ ಪೇಮೆಂಟ್ ನ್ನು ಆರೋಪಿಯ ಮಗ ಮಾಡಿರುತ್ತಾರೆ. ಕಾರಿನ ಕೊಟೇಶನ್ ಆರೋಪಿಯ ಮಗನ ಹೆಸರಿಗೆ ಇತ್ತು. ನಮ್ಮ ಬ್ಯಾಂಕ್ ಖಾತೆಯಿಂದ ಆರೋಪಿಯ ಖಾತೆಗೆ ಹಣವನ್ನು ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ಆರೋಪಿಯ ಖಾತೆಗೆ ಯಾವತ್ತಿಗೂ ಯಾವ ಸಂದರ್ಭದಲ್ಲಿ ಹಣವನ್ನು ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ನಾವು ಸಾಲವನ್ನು ನೀಡಿರುವುದು ಆರೋಪಿಯ ಮಗನಿಗೆ ಎಂದರೆ ಸರಿ. ಸಾಲದ ಸಬ್ಸಿಡಿ ಹಣ ಅದಕ್ಕಂತೆ ಇರುವ ನಮ್ಮ ಬ್ಯಾಂಕ ಖಾತೆಗೆ ಬಂದಿರುತ್ತದೆ. ಆರೋಪಿಯ ಹೆಸರಿಗೆ ನಮ್ಮ ಬ್ಯಾಂಕನಲ್ಲಿ ಖಾತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಬ್ಯಾಂಕ ಖಾತೆಗೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಲದ ಹಣದಲ್ಲಿ ಎಷ್ಟು ಕಂತನ್ನು ಕಟ್ಟಿರುತ್ತಾರೆ ಮತ್ತು ಬಾಕಿ ಉಳಿದ ಹಣದ ಬಗ್ಗೆ ಬ್ಯಾಂಕ ಖಾತೆಯ ಸ್ಟೇಟ ಮೆಂಟನ್ನು ಸಲ್ಲಿಸಿರುತ್ತೇವೆ. ಕಾರಿನ ಸಾಲದ ಕಂತುಗಳನ್ನು ಆರೋಪಿಯ ಮಗನ ಖಾತೆಯ ಮುಖಾಂತರ ಕಟ್ಟುತ್ತಿದ್ದರು. ಆರೋಪಿ ಯಾವತ್ತಿಗೂ ನಮ್ಮ ಬ್ಯಾಂಕಿಗೆ ಬಂದು ಸಾಲ ಬೇಕು ಎಂದು ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ಅವರ ಮಗನ ಸಾಲಕ್ಕೆ ಒಂದು ಪೋಸ್ಟ ಡೇಟೆಡ್ ಚೆಕ್ ನೀಡಿದ್ದರು ಎಂದು ನುಡಿಯುತ್ತಾರೆ. ಕಾರನ್ನು ಜಪ್ತು ಪಡಿಸಿಕೊಳ್ಳುವ ಸಂದರ್ಭದಲ್ಲಿ ಆರೋಪಿಗೆ ಯಾವುದೇ ನೋಟೀಸ್ ನೀಡಿಲ್ಲ. ಕಾರನ್ನು ಜಪ್ತು ಪಡಿಸಿಕೊಳ್ಳುವ ಸಂದರ್ಭದಲ್ಲಿ ಆರೋಪಿಯನ್ನಾಗಲಿ ಆರೋಪಿಯ ಮಗನನ್ನಾಗಲಿ ನಿಲ್ಲಿಸಿಕೊಂಡು ಛಾಯ ಚಿತ್ರ ತೆಗೆದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಬ್ಯಾಂಕ ನಿಯಮಾವಳಿ ಪ್ರಕಾರ ಜಪ್ತು ಪಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕಾರಿನ ನಂಬರ್ ಫಲಕ ಹಳದಿ ಬಣ್ಣದ ಪಲಕವಾಗಿರುತ್ತದೆ. ಆದ್ದರಿಂದ ಸದರಿ ಕಾರಿನ ದಾಖಲೆಗಳು ನಮ್ಮ ಬ್ಯಾಂಕಿನಲ್ಲಿ ಇವೆ ಎಂದರೆ ಸರಿ. ಸದರಿ ಕಾರನ್ನು ಮಾರಲು ನಮಗೆ ಯಾವುದೇ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಸದರಿ ಕಾರು ನಮ್ಮ ಬ್ಯಾಂಕಿನಿಂದ ಈಗಾಗಲೇ ಮಾರಾಟವಾಗಿದೆ. ಸದರಿ ಕಾರು ಎಷ್ಟು ಮೊತ್ತಕ್ಕೆ ಮಾರಾಟವಾಗಿದೆ ಮತ್ತು ಬಾಕಿ ಹಣ ಎಷ್ಟು ಉಳಿದಿದೆ ಎಂದು ದಾಖಲೆಗಳನ್ನು ಸಲ್ಲಿಸಿದ್ದೇನೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸಾಲ ನೀಡುವ ಸಂದರ್ಬದಲ್ಲಿ ಆರೋಪಿ ಮತ್ತು ಆರೋಪಿ ಮಗನ ಜಂಟಿ ಖಾತೆಗೆ ಸಾಲವನ್ನು ನೀಡಿರಲಿಲ್ಲ. ನಾವು ಹಾಜರುಪಡಿಸಿದ ದಾಖಲೆಗಳಲ್ಲಿ ಆರೋಪಿಯ ರುಜು ಎಲ್ಲಿಯೂ ಇಲ್ಲ ಎಂದರೆ ಸರಿ. ನಿಪಿ.1 ನ್ನು ಆರೋಪಿಯ ಮಗ ನಮಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮಗನೊಂದಿಗೆ ಮಿಲಾಪೆಯಾಗಿ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಗನಿಗೆ ಸಾಲ ನೀಡುವ ಸಂದರ್ಭದಲ್ಲಿ ಆರೋಪಿಯಿಂದ ಯಾವುದೇ ದಾಖಲೆ ಮೇಲೆ ಸಹಿ ಪಡೆದಿಲ್ಲ ಎಂದರೆ ಸರಿ. ಕಾರನ್ನು

ಮಾರಾಟ ಮಾಡಿದ ಬಗ್ಗೆ ನಮ್ಮ ಬಳಿ ದಾಖಲಾತಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆರೋಪಿ ತನ್ನ ಮಗನ ಸಾಲದ ಭದ್ರತೆಗಾಗಿ ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಮ್ಮ ಮಗನ ಸಾಲವನ್ನು ತೀರಿಸಲು ಆರೋಪಿ ನಿಪಿ.1 ಚೆಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯ ಮಗನಿಂದ ನಾನು ಚೆಕ್ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಗನಿಂದ ಆರೋಪಿಯ ಮಗನ ಚೆಕನ್ನು ಪಡೆದಿಲ್ಲ. ಅದೇ ರೀತಿ ಆರೋಪಿಯ ಮಗನಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಚೆಕ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ